**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 17/2022**

**ಪಿರ್ಯಾದಿದಾರರುಃ** ರಾಜ್ಯದ ಪರವಾಗಿ

ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತ/ರುಃ** ವಿಷಕಂಠೇಗೌಡ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ : 1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ ?

**ಆರೋಪಿಯ ಉತ್ತರ :**

**ಪ್ರಶ್ನೆ : 2.** ಪ್ರಾಸಾ.1 ಅನಿತ ಎಂ.ಜೆ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 09.06.2021 ರಂದು ಮಧ್ಯಾಹ್ನ 3.15 ಗಂಟೆಯಲ್ಲಿ ಚನ್ನರಾಯಪಟ್ಟಣದ ಕುರುವಂಕ ಗ್ರಾಮದ ದ್ವಾರದಲ್ಲಿ ಕೋವಿಡ್ ಸಂಬಂಧ ತಾನು, ಚಾಸಾ.4,5 ರವರು ಗಸ್ತು ಮಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದು ಕುರುವಂಕ ಗ್ರಾಮದ ವಿಷಕಂಠೇಗೌಡ ಬಿನ್ ನಂಜುಂಡೇಗೌಡ ಎಂಬುವವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ಮದ್ಯವನ್ನು ಸಂಗ್ರಹಿಸಿಟ್ಟಿರುತ್ತಾರೆ ಎಂದು ಮಾಹಿತಿ ನೀಡಿದ್ದು, ಅದರಂತೆ ಆರೋಪಿಯ ಅಂಗಡಿಯ ಬಳಿ ಹೋಗಿ ನೋಡಲಾಗಿ, ಅಲ್ಲಿದ್ದ ಒಬ್ಬ ವ್ಯಕ್ತಿ ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ, ಓಡಲು ಪ್ರಾರಂಭಿಸಿದ್ದು, ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಲಾಗಿ, ಆತ ಸಿಕ್ಕಿರುವುದಿಲ್ಲ, ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ : 3.** ಪ್ರಾಸಾ.1 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಅಂಗಡಿಯ ಒಳಗೆ ಹೋಗಿ ನೋಡಲಾಗಿ, ಅಂಗಡಿಯ ಮೂಲೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇದ್ದು, ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳು ತುಂಬಿರುವುದು ಕಂಡುಬಂದಿದ್ದು, ಅವುಗಳನ್ನು ತೆಗೆದು ನೋಡಲಾಗಿ, ಅದರಲ್ಲಿ ಸುಮಾರು 90 ಎಂ.ಎಲ್

ನ ಎಂ.ಸಿ.ನಂ.1 ತ್ರಿಬಲ್ ಎಕ್ಸ್ ರಂ ಎಂಬ ಹೆಸರಿಗೆ 56 ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡುಬಂದಿರುತ್ತದೆ, ಅವುಗಳ ಪರವಾನಿಗೆ ಬಗ್ಗೆ ಹುಡುಕಲಾಗಿ, ಅವುಗಳ ಬಗ್ಗೆ ಯಾವುದೇ ಪರವಾನಿಗೆ ಇರುವುದಿಲ್ಲ, ನಂತರ ಅವುಗಳನ್ನು ಪಂಚರ ಸಮಕ್ಷಮ ಮಹಜರ್ ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ : 4.** ಪ್ರಾಸಾ.4 ಅಭಿಲಾಶ್ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 09.06.2021 ರಂದು ಮಧ್ಯಾಹ್ನ 3.00 ಗಂಟೆಯಲ್ಲಿ ಚನ್ನರಾಯಪಟ್ಟಣದ ಕುರುವಂಕ ಗ್ರಾಮದ ದ್ವಾರದಲ್ಲಿ ಕೋವಿಡ್ ಸಂಬಂಧ ತಾನು, ಚಾಸಾ.1,4 ರವರು ಗಸ್ತು ಮಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದು ಕುರುವಂಕ ಗ್ರಾಮದ ವಿಷಕಂಠೇಗೌಡ ಬಿನ್ ನಂಜುಂಡೇಗೌಡ ಎಂಬುವವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ಮದ್ಯವನ್ನು ಸಂಗ್ರಹಿಸಿಟ್ಟಿರುತ್ತಾರೆ ಎಂದು ಮಾಹಿತಿ ನೀಡಿದ್ದು, ತಾವು ಮಾಹಿತಿ ಬಂದ ವ್ಯಕ್ತಿಯ ಮನೆಯ ಬಳಿ ಹೋಗುತ್ತಿರುವಾಗಲೇ ಅಲ್ಲಿದ್ದ ಒಬ್ಬ ವ್ಯಕ್ತಿ ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ, ಓಡಲು ಪ್ರಾರಂಭಿಸಿದ್ದು, ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಲಾಗಿ, ಆತ ಸಿಕ್ಕಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ : 5.** ಪ್ರಾಸಾ.4 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಅಂಗಡಿಯ ಒಳಗೆ ಹೋಗಿ ನೋಡಲಾಗಿ, ಅಂಗಡಿಯ ಮೂಲೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇದ್ದು, ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳು ತುಂಬಿರುವುದು ಕಂಡುಬಂದಿದ್ದು, ಅವುಗಳನ್ನು ತೆಗೆದು ನೋಡಲಾಗಿ, ಅದರಲ್ಲಿ ಸುಮಾರು 90 ಎಂ.ಎಲ್ ನ ಎಂ.ಸಿ.ನಂ.1 ತ್ರಿಬಲ್ ಎಕ್ಸ್ ರಂ ಎಂಬ ಹೆಸರಿಗೆ 56 ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡುಬಂದಿರುತ್ತದೆ, ಅವುಗಳ ಪರವಾನಿಗೆ ಬಗ್ಗೆ ಹುಡುಕಲಾಗಿ, ಅವುಗಳ ಬಗ್ಗೆ ಯಾವುದೇ ಪರವಾನಿಗೆ ಇರುವುದಿಲ್ಲ, ಈಗಾಗಿ ಚಾಸಾ.1 ರವರು ವಶಕ್ಕೆ ಪಡೆದುಕೊಂಡಿರುತ್ತಾರೆ, ನಂತರ ಅವುಗಳನ್ನು ಪರೀಕ್ಷಿಸಿದಾಗ ಅಬಕಾರಿ ಭದ್ರತಾ ಚೀಟಿ ಹರಿದ ಸ್ಥಿತಿಯಲ್ಲಿದ್ದು ಸ್ಪಷ್ಟತೆ ಇರಲಿಲ್ಲ, ಸದರಿ ಮದ್ಯದ ಪ್ಯಾಕೆಟ್ ಗಳನ್ನು ಒಂದು ಬಿಳಿಯ ಬಟ್ಟೆಯ ಬ್ಯಾಗಿನಲ್ಲಿ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಇಲಾಖಾ ಸೀಲನ್ನು ಮಾಡಲಾಯಿತು, ಸ್ಥಳದಲ್ಲಿಯೇ

ಚಾಸಾ.1 ರವರು ಮಹಜರ್ ಕ್ರಮವನ್ನು ತಯಾರಿಸಿರುತ್ತಾರೆ, ನಂತರ ದಿಃ 16.06.2021 ರಂದು ಸದರಿ ಮೊ. ಸಂಬಂಧಿಸಿದಂತೆ ಮು.ಮಾ ವನ್ನು ಕಛೇರಿಯ ಆದೇಶ ಪತ್ರದೊಂದಿಗೆ ಬೆಂಗಳೂರಿನ ಕೇಂದ್ರ ರಾಸಾಯನಿಕ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 6.** ಪ್ರಾಸಾ.5 ರೂಪ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 16.06.2021 ರಂದು ರಾಸಾಯನಿಕ ಪರೀಕ್ಷೆಗಾಗಿ ಮು.ಮಾ.1 ಅಬಕಾರಿ ಪೇದೆ ಚಾಸಾ.5 ರವರೊಂದಿಗೆ ವಿಧಿ ವಿಜ್ಞಾನ ಪರೀಕ್ಷೆಗೆ ಕಳುಹಿಸಿರುತ್ತೇನೆ, ದಿಃ 28.06.2021 ರಂದು ಕೃತ್ಯ ನಡೆದ ಸ್ಥಳದ ಮಾಲೀಕತ್ವ ಕೋರಿ ಪಂಚಾಯತಿ ಅಭಿವೃದ್ದಿ ಅಧಿಕಾರಿಯವರಿಗೆ ಮನವಿ ಸಲ್ಲಿಸಿರುತ್ತೇನೆ, ದಿಃ 02.08.2021 ರಂದು ಸದರಿಯವರಿಂದ ಮಾಹಿತಿ ಪಡೆದಿರುತ್ತೇನೆ, ದಿಃ 02.08.2021 ರಂದು ಸ್ಥಳದ ಮಾಲೀಕತ್ವ ಕೋರಿ ಗ್ರಾಮ ಲೆಕ್ಕಾಧಿಕಾರಿಯವರಿಗೆ ಮನವಿ ಸಲ್ಲಿಸಿರುತ್ತೇನೆ, ಅದೇ ದಿನ ಸದರಿಯವರು ಮನವಿಗೆ ಉತ್ತರದೊಂದಿಗೆ ಆರ್ ಟಿ ಸಿ ಸಲ್ಲಿಸಿರುತ್ತಾರೆ, ನಂತರ ಸಾಕ್ಷಿದಾರರ ಹಾಗೂ ಆರೋಪಿಯ ಹೇಳಿಕೆ ಪಡೆದಿರುವುದಾಗಿ ನಂತರ ದಿಃ 31.08.2021 ರಂದು ಆರೋಪಿತರ ವಿರುದ್ದ ದೊಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 7 ಃ** ನೀವು ಏನಾದರೂ ಹೇಳಲು ಬಯಸುತ್ತೀರಾ ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 8 ಃ** ನಿಮ್ಮ ಪ್ರತಿರಕ್ಷಣೆಗೆ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

**ಆರೋಪಿಯ ಉತ್ತರ :**

(ಮೇಲೆ ತಿಳಿಸಿದ ಎಲ್ಲಾ ವಿವರಗಳನ್ನು ಓದಿ, ಹೇಳಿ, ಕೇಳಲಾಗಿ ಆತನು ನೀಡಿದ ಉತ್ತರಗಳನ್ನು ಸ್ವತಃ ನನ್ನ ಕೈ ಬರಹದಲ್ಲಿ ಬರೆದು ದೃಢೀಕರಿಸಿರುತ್ತೇನೆ.)

ದಿನಾಂಕಃ **30.12.2025**

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.